# 'ವೀರ್ಯ'ವಂತರಿಗಿದು ಅಗ್ನಿಪರೀಕ್ಷೆಯ ಕಾಲ!

## ಪುರುಷ ಬಂಜೆತನ ಹೆಚ್ಚುತ್ತಿದೆಯೆ?

ಜನಸಂಖ್ಯೆಯಲ್ಲಿ ಚೀನಾವನ್ನು ಹಿಂದಿಕ್ಕಿರುವ ಭಾರತ ವಿಶ್ವದಲ್ಲೇ ನಂ.1 ಎನ್ನುವ ಅಗ್ಗಳಿಕೆಗೆ ಪಾತ್ರವಾಗಿದೆ. ಜನಸಂಖ್ಯೆಯ ಉಬ್ಬರದ ಈ ವಿದ್ಯಮಾನದ ಮತ್ತೊಂದು ಮಗ್ಗುಲಲ್ಲಿ ಬಂಜೆತನದ ಸಮಸ್ಯೆಯಿಂದ ಬಳಲುತ್ತಿರುವ ದಂಪತಿಯರ ಸಂಕಟವನ್ನು ಗಮನಿಸಬೇಕು. ಈವರೆಗೂ ಸಂತಾನೋತ್ಪತ್ತಿ ಸಮಸ್ಯೆಗೆ ಕಾರಣವಾಗಿ ಹೆಣ್ಣನ್ನು ದೂಷಿಸಲಾಗುತ್ತಿತ್ತು. ಬದಲಾದ ಸಾಮಾಜಿಕ ಸಂದರ್ಭದ ಹಿನ್ನೆಲೆಯಲ್ಲಿ ಗಂಡು ಕೂಡ ವೈದ್ಯಕೀಯ ಪರೀಕ್ಷೆಗಳಿಗೆ ಒಡ್ಡಿಕೊಳ್ಳುತ್ತಿದ್ದಾನೆ. ಇದರ ಫಲವಾಗಿ 'ಪುರುಷ ಬಂಜೆತನ'ದ ಉದಾಹರಣೆಗಳು ಬೆಳಕಿಗೆ ಬರುತ್ತಿವೆ. ಹೆಚ್ಚಿನ ಸಂಖ್ಯೆಯ ಗಂಡಸರಲ್ಲಿ ಸಂತಾನೋತ್ಪತ್ತಿ ಸಾಮರ್ಥ್ಯ ಕ್ಷೀಣಗೊಂಡಿದೆ. ವೀರ್ಯಾಣುವಿನ ಸಂಖ್ಯೆ ಕೊರತೆ ಮತ್ತು ಗುಣಮಟ್ಟದ ವೀರ್ಯಾಣುಗಳ ಕೊರತೆ ಪುರುಷರಲ್ಲಿ ಬಂಜೆತನಕ್ಕೆ ಕಾರಣವಾಗಿದೆ. ಈ 'ಪುರುಷ ಬಂಜೆತನ' ಪ್ರಸ್ತುತ ಜಾಗತಿಕ ಸಮಸ್ಯೆಯಾಗಿ ಪರಿಣಮಿಸಿದೆ. ಇದರ ಫಲವಾಗಿಯೇ 'ಐವಿಎಫ್' ಕೇಂದ್ರಗಳು ಕಲ್ಯಾಣಮಂಟಪಗಳ ರೀತಿ ರೂಪುಗೊಂಡಿವೆ. ಪುರುಷರ ಫಲವಂತಿಕೆಯನ್ನು ಬಹು ಆಯಾಮಗಳಲ್ಲಿ ಚರ್ಚಿಸುವ ಈ 'ಮುಖಪುಟ' ವಿಶ್ಲೇಷಣೆಗಳು, ಈ ಹೊತ್ತಿನ ಸಾಮಾಜಿಕ ಸ್ಥಿತಿಗತಿಯನ್ನು ಅರ್ಥ ಮಾಡಿಕೊಳ್ಳಲು ತೋರುಬೆರಳಿನಂತಿವೆ.

■ ಉಮಾ ಅನಂತ್